ಬಂದರು. ಕೆಳಕ್ಕೆ ತೆಗೆದುಕೊಂಡು ಬಂದಮೇಲೆ ಆತನನ್ನು ಜೀಪಿನಲ್ಲಿ ತೆಗೆದುಕೊಂಡು ಹೋಗಲಿಲ್ಲ. ಅವರ ಕೊರಳ ಪಟ್ಟಿಯನ್ನು ಹಿಡಿದುಕೊಂಡು ಏನೇನೋ ಅವಾಚ್ಯ ಶಬ್ದಗಳಿಂದ ಬೈದು ವಿಕ್ರಮ ಸಾರಾಯಿ ಪಾವಟೆ ಹತ್ತಿರದಿಂದ ದರದರನೆ ಎಳೆದುಕೊಂಡು ಸೂಪರ್ ಮಾರ್ಕೆಟ್ ಮಾರ್ಗವಾಗಿ ಚಪ್ಪಲಿ ಬೂಡ್ಸ್‌ನಿಂದೆಲ್ಲಾ ಹೊಡೆದು ತಲೆಗೆ ಜಜ್ಜಿ ಅಮಾನುಷ ರೀತಿಯಲ್ಲಿ ಎಳೆದುಕೊಂಡು ಹೋಗಿದ್ದಾರೆ. ಈ ರೀತಿ ಇವರು ಹೊಡೆದು, ಒದ್ದು ಎಳೆದುಕೊಂಡು ಹೋಗುವುದಕ್ಕೆ ಯಾವ ಹಿನ್ನೆಲೆ ಇದೆ? ಇದಕ್ಕೆ ಕಾರಣ ಏನು ? ಪೋಲೀಸರ ಮೇಲೆ ಕ್ರಾಂತಿ ಪತ್ರಿಕೆಯಲ್ಲಿ ಬರೆದಿದ್ದಾರೆ. ಗುಲ್ಬರ್ಗದ ಸಚಿವರ ಮೇಲೆಯೂ ಕ್ರಾಂತಿ ಪತ್ರಿಯ ಸಂಪಾದಕರು ಏನೋ ಬರೆದಿದ್ದಾರೆ. ಇದರ ಬಗ್ಗೆ ಸಾಕಷ್ಟು ಮಾತುಕತೆ ಆಗಿದೆ. ಆದುರಂದ ಇವತ್ತು ಇಂತಹ ಟೀಕೆ ಮಾಡತಕ್ಕ ಪತ್ರಿಕಾ ಸಂಪಾದಕನ ಹುಟ್ಟನ್ನು ಆಡಗಿಸಬೇಕೆಂದು ಹೇಳಿ ಪೋಲೀಸರು ಈ ರೀತಿ ಅಮಾನಂಷ ರೀತಿಯಲ್ಲಿ ವರ್ತನೆ ಮಾಡಿದ್ದಾರೆಂದು ಹೇಳಬೇಕಾಗುತ್ತದೆ. ಇವತ್ತು ಪತ್ರಿಕಾ ಸ್ವಾತಂತ್ರ್ಯ ಇಲ್ಲದ ರೀತಿಯಲ್ಲಿ, ನಾಗರೀಕರು ಸ್ವಾತಂತ್ರ್ಯವಾಗಿ ಓಡಾಡಲು ಆಗದ ರೀತಿಯಲ್ಲಿ ಇವತ್ತು ಆತನನ್ನು ರಸ್ತೆಯಲ್ಲಿ ದರದರನೆ ಜನಜಂಗುಳಿ ಇರತಕ್ಕ ಪ್ರದೇಶದಲ್ಲಿ ಎಳೆದುಕೆಂಡು ಹೋಗಬೇಕಾದರೆ ಇದು ಎಂತಹ ಗಂಭೀರವಾದ ವಿಚಾರವೆಂದು ನಾವು ತಿಳಿದುಕೊಳ್ಳಬೇಕಾಗಿದೆ. ಇದು ಪತ್ರಿಕಾ ಸ್ವಾತಂತ್ರ್ಯಕ್ಕೆ ಸಂಬಂಧಪಟ್ಟ ವಿಚಾರ.

(ಗೊ ಂ ದ ಲ)

ನಿಯಮ ೩೫೪ ರ ಕೆಳಗೆ ಗುಲ್ಬರ್ಗಾದಲ್ಲಿ ಕ್ರಾಂತಿ ದಿನಪತ್ರಿಕೆಯ ಸಂಪಾದಕರಾದ ಸಿದ್ದರಾಮೇಶ್ವರರ ಮೇಲೆ ನಡೆದ ಹಲ್ಲೆಯ ಬಗ್ಗೆ.

ಶ್ರೀ ಎಂ. ವೀರಪ್ಪಮೊಯ್ಲಿ.—ನಾಚಿಕೆಯಾಗುವಂಥ ಕೆಲಸ ಮಾಡಿದ್ದಾರೆ. ತಲೆ ತಗ್ಗಿಸಬೇಕಾಗದ ವಿಚಾರ ಮಾತ್ರವಲ್ಲ, ಇದನ್ನು ಖಂಡಿಸಬೇಕಾಗುತ್ತದೆ. ರಾಜ್ಯದಲ್ಲಿ ಎಲ್ಲಾ ಕಡೆಯೂ ಪೋಲೀಸರ ದೌರ್ಜನ್ಯ ನಡೆಯುತ್ತಿದೆ. ಇವತ್ತು ಪ್ರತಿಕಾಕರ್ತರು ಟೀಕೆ ಮಾಡುವಂಥ ಪರಿಸ್ಥಿತಿಯಲ್ಲಿ ಇಲ್ಲ. ಸಂಜೆವಾಣಿ ಪತ್ರಿಕೆಯ ಮೇಲೂ ಇಂಥ ಘಟನೆಗಳು ನಡೆದಿವೆ. ಸಂಜೆವಾಣಿ ಪತ್ರಿಕೆ ಸಂಪಾದಕರ ಮೇಲೆ ದಾಳಿ ಮಾಡಿದರು. ಈಗ ಕ್ರಾಂತಿ ಪತ್ರಿಕೆ ಸಂಪಾದಕರ ಮೇಲೆ ಹಲ್ಲೆ ಮಾಡಿದ್ದಾರೆ. ಇದು ಜಿಲ್ಲಾಮಟ್ಟದಲ್ಲಿ ಪ್ರಕಟವಾಗುವಂತ ಪತ್ರಿಕೆ. ನಮ್ಮ ಸರ್ಕಾರ ಇದ್ದಾಗಲೂ ಕೂಡ ಟೀಕೆ ಮಾಡಿದ್ದಾರೆ, ನಾವು ಇಂಥ ಒಂದು ದೌರ್ಜನ್ಯವನ್ನು ಮಾಡಲಿಲ್ಲ ಏನ್ನೆ ಮಾನ್ಯ ಮಂತ್ರಿಗಳು ತಪ್ಪು ಉತ್ತರ ಕೊಟ್ಟಿದ್ದಾರೆ. ಇದುವರೆವಿಗೂ ಅಲ್ಲಿನ ಸಬ್ ಇನ್ಸ್‌ಪೆಕ್ಟರ್ ಮೇಲಾಗಲೀ, ಇನ್ನಿತರ ಪೋಲೀಸ್ ಅಧಿಕಾರಿಗಳ ಮೇಲಾಗಲಿ ಕ್ರಮ ತೆಗೆದುಕೊಂಡಿಲ್ಲ. ನೀವು ನಾಚಿಕೆ ಪಟ್ಟುಕೊಳ್ಳಬೇಕು. ಅಲ್ಲಿನ ಜನತಾಪಕ್ಷದವರೇ ದೌರ್ಜನ್ಯವನ್ನು ಖಂಡಿಸಿದ್ದಾರೆ. ಅಲ್ಲಿನ ಬಾರ್ ಅಸೊಸಿಷಿಯನ್‌ನವರು ಖಂಡಿಸಿದ್ದಾರೆ. ನಾಗರೀಕರು ತಲೆ ತಗ್ಗಿಸಬೇಕಾದ ಕೃತ್ಯವನ್ನು ಪೋಲೀಸಿನವರು ಮಾಡಿದ್ದಾರೆ. ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ನ್ಯಾಯಾಂಗ ವಿಚಾರಣೆಯಾಗಬೇಕು. ಯಾವ ಅಧಿಕಾರಿಗಳು ಅನಾಗರೀಕ ರೀತಿಯಲ್ಲಿ ಅಮಾನುಷ ರೀತಿಯಲ್ಲಿ ಈ ಒಂದು ಕೃತ್ಯವನ್ನು ಎಸಗಿದ್ದಾರೆ, ಅವುರಂಗಳನ್ನು ಕೂಡಲೇ ಅಮಾನತ್ತಿನಲ್ಲಿಡಬೇಕು. ಇವತ್ತು ಪತ್ರಿಕಾ ಸ್ವಾತಂತ್ರ್ಯಕ್ಕೆ ದೊಡ್ಡ ಆಘಾತವಾಗಿದೆ. ಈ ವಿಷಯದಲ್ಲಿ ಮಾನ್ಯ ಸದಸ್ಯರಾದ ಮುಲ್ಲಿಕಾರ್ಜುನ ಖರ್ಗೆಯವರು ಕೆಲವು ವಿಷಯಗಳನ್ನು ತಿಳಿಸುವವರಿದ್ದಾರೆ.

ಶ್ರೀ ಧರ್ಮಸಿಂಗ್.—ಮಾನ್ಯ ಅಧ್ಯಕ್ಷರೇ, ನಾನು ನೋಟೀಸ್‌ಗೆ ರುಜು ಮಾಡಿದ್ದೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಸ್ತಾಪ ಮಾಡಿದ ವಿಷಯಗಳನ್ನು ನಾನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಗುಲ್ಬರ್ಗ ನಗರದಲ್ಲಿ ಕ್ರಾಂತಿ ದಿನಪತ್ರಿಕೆಯ ಸಂಪಾದಕರಾದ ಶ್ರೀ ಸಿದ್ದರಾಮೇಶ್ವರರ ಮೇಲೆ ಹಲ್ಲೆ ನಡೆದಿದೆ. ೧೯೫೨ ರಿಂದ ಅಂದರೆ ಕಳೆದ ಮೂವತ್ತು ವರ್ಷಗಳಿಂದಲೂ ಗುಲ್ಬರ್ಗ ನಗರದಲ್ಲಿ ಇಂಥ ಘಟನೆ ನಡೆದಿರಲಿಲ್ಲ. ಇವತ್ತು ಸರ್ಕಾರ ನಡೆಸತಕ್ಕ ಜನ ಏನಿದ್ದಾರೆ ಅವರು ಇದರಲ್ಲಿ ಭಾಗಿಯಾಗಿದ್ದಾರೆ. ಈ ಘಟನೆ ನಡೆದ ದಿವಸ ಅಲ್ಲಿ ಒಂದು ಉರುಸು ನಡೆದಿದೆ, ಸಾವಿರಾರು ಜನ ಬಂದಿದ್ದಾರೆ. ಲಕ್ಷಗಟ್ಟಲೆ ಜನರು ನೆರೆದಿರತಕ್ಕ ಸಂದರ್ಭದಲ್ಲಿ, ಕರಿಬಸಪ್ಪ ಎನ್ನುವ ಸಬ್‌ಇನ್ಸ್‌ಪೆಕ್ಟರು ರಸ್ತೆಯಲ್ಲಿ ಪತ್ರಿಕಾ ಸಂಪಾದಕನನ್ನು ಎಳೆದುಕೊಂಡು ಹೋಗಿ ಹೊಡೆದಿದ್ದಾರೆ. ಯಾವರೀತಿ ಹೊಡೆದಿದ್ದಾರೆಂದರೆ, ನನ್ನ ಹತ್ತಿರ ಫೋಟೋಗಳು ಇವೆ. ಅವನು ಬೇಡಿಕೊಳ್ಳುತ್ತಿದ್ದರೂ ಪೋಲೀಸರು

ಬಿಟ್ಟಿಲ್ಲ ಆ ರೀತಿ ಹೊಡೆದಿದ್ದಾರೆ. ಮಾಜಿ ವಿಧಾನ ಸಭಾ ಸದಸ್ಯರಾದ ಎಂ.ವೈ. ಪಾಟೀಲರು ಹೋಗಿದ್ದಾರೆ, ಬಾರ್ ಅಸೋಷಿಯೇಷನ್ ಪ್ರೆಸಿಡೆಂಟ್ ಹೋಗಿದ್ದಾರೆ, ಆತನ ಹೆಂಡತಿ ಹೋಗಿ ಎಸ್. ಪಿ. ಹತ್ತಿರ ಬೇಡಿಕೊಂಡರೂ ಬಿಟ್ಟಿಲ್ಲ. ಪಕ್ಕದ ಜೇವರ್ಗಿ ತಾಲ್ಲೂಕಿನಲ್ಲೂ ಇಂಥದ್ದೇ ಘಟನೆ ನಡೆದಿದೆ. ಸಾರ್ವಜನಿಕರಲ್ಲಿ ಪೋಲೀಸಿನವರ ಬಗ್ಗೆ ಬಯದ ವಾತಾವರಣ ಹುಟ್ಟಿದೆ. ಇದರಲ್ಲಿ ಯಾವ ಪೋಲೀಸ್ ಅಧಿಕಾರಿಗಳು ಒಳಗಾಗಿದ್ದಾರೋ ಅವರ ಮೇಲೆ ಕೂಡಲೇ ಸರ್ಕಾರ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ. ಈ ವಿಷಯದಲ್ಲಿ ಮಾನ್ಯ ಮುಖ್ಯಮಂತ್ರಿಗಳೇ ಬಂದು ಉತ್ತರ ಕೊಡಬೇಕೆಂದು ಆಗ್ರಹ ಪಡಿಸುತ್ತೇನೆ.

ಶ್ರೀ ಎಂ.ಎಸ್. ಕೃಷ್ಣನ್.--ಸ್ವಾಮಿ, ನಾನು ಪತ್ರಿಕೆ ಓದುವುದಕ್ಕೆ ಹೋಗುವುದಿಲ್ಲ. ವಿಷಯ ಬಹಳ ಗಂಭೀರವಾಗಿದೆ.

ಅಧ್ಯಕ್ಷರು.—ಮಧ್ಯದಲ್ಲಿ ಚರ್ಚೆ ಮಾಡಬಾರದು.

ಶ್ರೀ ಎಂ. ಎಸ್. ಕೃಷ್ಣನ್.—ಒಬ್ಬ ಪತ್ರಿಕೋದ್ಯಮಿಯನ್ನು ಪೋಲೀಸಿನವರು ತಳಸಿದ್ದಾರೆ. ನಮ್ಮ ಪಕ್ಷದ ಗುಲ್ಬರ್ಗ ಜಿಲ್ಲೆಯ ಕಾರ್ಯದರ್ಶಿಗಳಾದ ಪದ್ಮಾಕರ್ ಚಿನ್ನಿ ಯವರು ಬಂದಿದ್ದರು, ಅವರು ಕೂಡ ಕಣ್ಣಾರೆ ಕಂಡೆ ಎಂದು ಹೇಳಿದರು. ನಾನು ದಾರಿಯಲ್ಲಿ ಬರುತ್ತಿರುವಾಗ ಕ್ರಾಂತಿ ಪತ್ರಿಕೆಯ ಸಂಪಾದಕ ಸಿದ್ದರಾಮೇಶ್ವರರಿಗೆ ಪೋಲೀಸಿನವರು ಸಿಕ್ಕಾಪಟ್ಟೆ ಹೊಡೆದರು ಎಂದು ಅವರು ಹೇಳಿದರು. ಇಲ್ಲಿ ಪತ್ರಿಕೆಯವರು ಸರ್ಕಾರದ ಬಗ್ಗೆ, ಅಧಿಕಾರಿಗಳ ಬಗ್ಗೆ ಟೀಕೆ ಮಾಡಿದರೆ ಅಸಾಧು ಅಥವಾ ಅಸತ್ಯ ಎನ್ನುವುದು ಮುಖ್ಯ ಪ್ರಶ್ನೆಯಲ್ಲ. ಪತ್ರಿಕೆಯವರಿಗೆ ಟೀಕೆ ಮಾಡುವುದಕ್ಕೆ ಖಂಡಿಸುವುದಕ್ಕೆ ಅಧಿಕಾರ ಇದೆ. ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಅಧಿಕಾರ ಇದೆ. ಹೀಗಿರಬೇಕಾದರೆ, ಪೋಲೀಸಿನವರು ಇವತ್ತು ಕಾನೂನು ಮೊಟಕು ಮಾಡುವ ರೀತಿಯಲ್ಲಿ ವರ್ತಿಸಿರುವುದು ಅಕ್ಷಮ್ಯ ಅಪರಾಧ ವಾಗುತ್ತದೆ. ಪ್ರಜಾಪ್ರಭುತ್ವಕ್ಕೆ ತಿಲಾಂಜಲಿಯನ್ನು ಕೊಡತಕ್ಕ ರೀತಿಯಲ್ಲಿ ವರ್ತಿಸಿದ್ದಾರೆ. ನೀರು ಕೊಡಿ ಎಂದು ಕೇಳಿಕೊಂಡರೂ ನೀರು ಕೊಟ್ಟಿಲ್ಲ ಅಮ್ಮೊಂದು ಅಮಾನುಷವಾಗಿ ವರ್ತಿಸಿದ್ದಾರೆ. ಇನ್ನು ಅವಾಚ್ಯಶಬ್ದಗಳಿಂದ ಬೈದಿದ್ದಾರೆ. ಇಂಥ ಒಂದು ಪರಿಸ್ಥಿತಿ ನಮ್ಮ ರಾಜ್ಯದಲ್ಲಿ ಬರಬಾರದಾಗಿತ್ತು. ನಮ್ಮ ಸ್ನೇಹಿತರು ಜನತಾಪಕ್ಷದ ಜೊತೆ ಹೇಗಿದ್ದೀರಿ ಎಂದು ಹೇಳಿದರು. ಇವರ ಸರ್ಕಾರ ಇದ್ದಾಗಲೂ ಡೆಕ್ಕನ್ ಹೆರಾಲ್ಡ್ ಪತ್ರಿಕೆ ಕಾರ್ಯಾಲಯಕ್ಕೆ ಗೂಂಡಾಗಳನ್ನು ಕಳುಹಿಸಿ ಹೊಡೆಸಿದರು. ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆ ಕಾರ್ಯಾಲಯದ ಮೇಲೆ ದಾಳಿ ಮಾಡಿದರು. ಇದನ್ನು ಯಾರೇ ಮಾಡಲಿ ಖಂಡಿಸ ಬೇಕಾಗುತ್ತದೆ. ಈ ಕೃತ್ಯವನ್ನು ಖಂಡಿಸುವುದಕ್ಕಾಗಿ ಗುಲ್ಬರ್ಗಾ ಬಂದ್ ಆಚರಿಸಲಾಗಿದೆ, ಜನತಾ ಪಕ್ಷದ ನಾಯಕರು ಹಾಗೂ ಕಾರ್ಯಕರ್ತರಲ್ಲಿ ಒಬ್ಬರಾದ ವಜ್ರಕುಮಾರ್ ಕಿವುಡೆಯವರು ಪೋಲೀಸ್ ದೌರ್ಜನ್ಯವನ್ನು ಖಂಡಿಸಿದ್ದಾರೆ. ಇದರ ಬಗ್ಗೆ ವಿಚಾರಣೆಯಾಗಿ, ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸಬೇಕೆಂದು ನಾನಂ ಕೇಳಿಕೊಳ್ಳುತ್ತೇನೆ. ಅಧ್ಯಕ್ಷರೆ, ಜನತಾ ಪಕ್ಷದ ಮುಖಂಡರುಗಳೇನೇ ಇದನ್ನು ಖಂಡಿಸಿದ್ದಾರೆ ಇದು ಬಹಳ ಸಂತೋಷದ ವಿಷಯ. ಮೊದಲು ಇವರನ್ನು ಅಮಾನತ್ತಿನಲ್ಲಿಟ್ಟು ನ್ಯಾಯ ದೊರಕಿಸಿ ಕೊಡಿ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಅಧ್ಯಕ್ಷರೆ, ಈಗ ಏನಾಗಿದೆ, ನಮ್ಮ ವಿರೋಧ ಪಕ್ಷದ ನಾಯಕರು ನಮ್ಮ ಸ್ನೇಹಿತರಾದಂಥ ಧರ್ಮಸಿಂಗ್, ಕೃಷ್ಣನ್‌ರವರು ಹೇಳಿರತಕ್ಕ ಮಾತುಗಳನ್ನು ಪುಷ್ಟೀಕರಿಸುತ್ತಾ ಪೋಲೀಸರ ದೌರ್ಜನ್ಯವನ್ನು ಖಂಡಿಸುತ್ತೇನೆ. ಪ್ರಜಾಪ್ರಭುತ್ವದಲ್ಲಿ ಪೋಲೀಸರ ಕರ್ತವ್ಯ ಏನು ಅವರು ಏನು ಮಾಡಬೇಕು ಎನ್ನುವುದನ್ನು ಮೀರಿತು ವರ್ತನೆ ಮಾಡುತ್ತಿದ್ದಾರೆ, ಗುಲ್ಬರ್ಗ ಅಂಥ ಸಿಟಿಯಲ್ಲಿ ಈ ರೀತಿ ಆಗಬೇಕಾದರೆ ಬೇರೆ ಕಡೆ ಪೋಲೀಸರು ಏನು ಮಾಡುತ್ತಾರೆ ಎನ್ನುವುದನ್ನು ಊಹೆ ಮಾಡಲಿಕ್ಕೆ ಸಾಧ್ಯವಿದೆ. ತಮಗೆ ಗೊತ್ತಿದೆ, ಎಲ್ಲಾ ಕಡೆಗಳಲ್ಲೂ ದರೋಡೆ ಗಳಾಗುತ್ತವೆ, ಖೂನಿಗಳು ಆಗುತ್ತವೆ ಅಲ್ಲಿ ಪೋಲೀಸರು ಜಾಣ್ಮೆಯಿಂದ ವರ್ತನೆ ಮಾಡುವುದಿಲ್ಲ. ಗುಲ್ಬರ್ಗ ಪಟ್ಟಣದಲ್ಲಿ ಒಬ್ಬ ಪತ್ರಿಕಾ ಸಂಪಾದಕನಿಗೆ ಈ ರೀತಿ ಮಾಡಿರುವುದು ಅಕ್ಷಮ್ಯ ಅಪರಾಧ, ಅಷ್ಟೇ ಮಟ್ಟಿಗೆ ಖಂಡನಾರ್ಹ ಎಂದು ಹೇಳಬಯಸುತ್ತೇನೆ. ಇವರ ವರ್ತನೆಯನ್ನು ಖಂಡಿಸುತ್ತಾ, ಇದರ ಬಗ್ಗೆ ಜ್ಯುಡಿಷಿಯಲ್ ಎನ್‌ಕ್ವಯಿರಿ ಆಗಬೇಕೆಂದು ಹೇಳುತ್ತೇನೆ. ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳನ್ನು ಸಸ್ಪೆಂಡ್‌ನಲ್ಲಿಡಬೇಕು. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿರತಕ್ಕದ್ದನ್ನು ಮತ್ತೊಮ್ಮೆ ಪುಷ್ಟೀಕರಿಸುತ್ತಾ ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಸಮರ್ಪಕವಾಗಿ ಉತ್ತರ ಕೊಟ್ಟು ಜುಡಿಷಿಯಲ್ ಎನ್‌ಕ್ವಯಿರಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

(ಗೊಂದಲ)

ಶ್ರೀ ಸೂರ್ಯನಾರಾಯಣರಾವ್.—ಅಧ್ಯಕ್ಷರೆ.....

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೆ,.....

(ಗೊಂದಲ)

ಶ್ರೀ ಕೆ. ಹೆಚ್. ರಂಗನಾಥ್,— ಅಧ್ಯಕ್ಷರೆನಿಯಂಮು ಷಿಳಿ ರಲ್ಲಿ....

(ಗೊಂದಲ)

ಅಧ್ಯಕ್ಷರು.—ಇವೊತ್ತು ಡಿಸ್‌ಕಷನ್ ಇದೆ. I don't want to enlarge...

(ಗೊಂದಲ)

...I cannot widen the scope of 334,

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅಧ್ಯಕ್ಷರೆ,

MR. SPEAKER.—The Business Advisory Committee has agreed to take up the discussion on price rise. It is equally an important matter. Therefore...

SRI MALLIKARJUNA KHARGE.—This is also important.

MR. SPEAKER.—These are also important. matters where 4 or 5 people have given notice. I only appeal to the members to confine themselves to tho limited subject on the agenda.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೆ, ಈಗಾಗಲೇ ವಿರೋಧ ಪಕ್ಷದ ನಾಯಕರು ಮತ್ತು ಬೇರೆ ಮಾನ್ಯ ಸದಸ್ಯರು ಅನೇಕ ವಿವರಗಳನ್ನು ತಿಳಿಸಿದ್ದಾರೆ. ಪುನ: ಅದರ ಪ್ರಸ್ತಾಪದ ಅವಶ್ಯಕತೆ ಇದೆ ಎಂದು ಬಯಸುವುದಿಲ್ಲ. ನಾವು ಪತ್ರಿಕಾ ಸ್ವಾತಂತ್ರ್ಯ ಪ್ರತಿಪಾದನೆ ಮಾಡುತ್ತಾ ಬಂದಿದ್ದೇವೆ. ಈ ಪತ್ರಿಕಾ ಸ್ವಾತಂತ್ರ್ಯ ಹರಣ ಮಾಡತಕ್ಕ ವಿಚಾರದಲ್ಲಿ ಯಾರೇ ಕೈ ಹಾಕಿದರು? ನನ್ನ ಪ್ರತಿಕ್ರಿಯೆ ವ್ಯಕ್ತ ಮಾಡಿಕೊಂಡು ಬಂದಿದ್ದೇವೆ. ಇಲ್ಲಿ ಏನಾಗಿದೆ ಅವರನ್ನು ಅಮಾನುಷವಾಗಿ ಹೊಡೆದಿದಾರು ಅಲ್ಲದೆ. ಅವರಲ್ಲಿದ್ದ ಚೈನು ೫೦೦ ರೂಪಾಯಿ ಹಣ ಕಿತ್ತುಕೊಂಡು ಹೋಗಿದ್ದಾರೆ ಎನ್ನುವ ವಿಚಾರ ಇದೆ. ಇದು ಪತ್ರಿಕಾ ಸ್ವಾತಂತ್ರ್ಯದ ಹರಣ ಅಷ್ಟೇ ಅಲ್ಲ ಜೊತೆಗೆ ದರೋಡೆ ಕೂಡ ಹೌದು. ಈ ರೀತಿ ವಿಚಾರಗಳು ಇದ್ದರೂ ಕೂಡ ಈ ಪೋಲೀಸ್ ಅಧಿಕಾರಿಗಳು ಕಾನೂನು ಬಾಹಿರವಾಗಿ ತಮ್ಮ ವರ್ತನೆಯಲ್ಲಿ ದರೋಡೆ ಮಾಡಿದ್ದಾರೆ ಅಂದರೆ ಕೇಸು ರಿಜಿಸ್ಟರ್ ಆಗಬೇಕಾಗುತ್ತದೆ. ಇಲ್ಲಿ ಹಣ, ಚೈನು ಕಿತ್ತುಕೊಂಡು ಹೋಗಿದ್ದಾರೆ. ಕೇಸ್ ರಿಜಿಸ್ಟರ್ ಮಾಡಿದ್ದಾರೆಯೇ?

ಅಧ್ಯಕ್ಷರು.—ಮಂತ್ರಿಗಳು ಏನು ಹೇಳುತ್ತಾರೆ ನೋಡೋಣ.

ಶ್ರೀ ಎಸ್ ಬಂಗಾರಪ್ಪ.— ಅಧ್ಯಕ್ಷರೆ, ಇಲ್ಲಿ ನಮಗೆ ಮುಖ್ಯಮಂತ್ರಿಗಳು ಬೇಕಾಗಿತ್ತು. ಅವರು ಕೊಡುವ ಉತ್ತರ ಬೇಡ ಎಂದು ಅದರ ಅರ್ಥವಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಮುಖ್ಯವಾಗಿ ಬೇಕಾಗುತ್ತದೆ.

ಅಧ್ಯಕ್ಷರು.—ಅವರೇನು ಅಮುಖ್ಯರೇನಲ್ಲ ಹೇಳಿ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಮುಖ್ಯ ಮಂತ್ರಿಗಳು ಬೆಳಿಗ್ಗೆ ಒಂದು ಸಾರಿ ಬಂದಿದ್ದರು. ಈಗ ಆ ಸದನಕ್ಕೆ ಹೋಗಿದ್ದಾರೆಯೋ ಏನೋ ಗೊತ್ತಿಲ್ಲ. ಅನೇಕಸಾರಿ ಈ ಸದನದಲ್ಲಿ ಪದೇ ಪದೇ ಚರ್ಚೆ ನಡೆದಾಗ ರಾಜ್ಯ ಸಚಿವರಾರ್ಯಾಥ ಜಿಗಜಿನಿಗಿಯವರು ಉತ್ತರ ಕೊಡುತ್ತಿದ್ದಾರೆ. ನಿಜವಾಗಿ ಅವರು ಬಹಳ ಕಷ್ಟಪಟ್ಟು ಕೊಡುತ್ತಿದ್ದಾರೆ. ನನಗೆ ಸಂತೋಷ ಇದೆ ಇಲ್ಲ ಎಂದು ಅಲ್ಲ. ಆದಷ್ಟು ಪ್ರಾಮಾಣಿಕ ಪ್ರಯತ್ನ ಮಾಡುತ್ತಾರೆ ಇಲ್ಲ ಎಂದು ಹೇಳುವುದಿಲ್ಲ. ಆದರೆ ಅನೇಕ ವಿವರಗಳನ್ನು ಇಟ್ಟು

ಅಥಾರಿಟೀಟೀವ್ ಉತ್ತರ ಕೊಡತಕ್ಕವರು ಗೃಹ ಖಾತೆಯ ಸಂಪೂರ್ಣ ಸಚಿವರು. ಆದ್ದರಿಂದ ಗೃಹ ಖಾತೆಯ ಸಂಪೂರ್ಣ ಸಚಿವರಾದ ಮಾನ್ಯ ಮುಖ್ಯ ಮಂತ್ರಿಗಳು ಈ ಸದನದಲ್ಲಿರಬೇಕು. ಸೋಮವಾರ ಈ ಸದನಕ್ಕೆ ಉತ್ತರ ಹೇಳುತ್ತೇವೆ ಎನ್ನುವ ಮಾತು ಉತ್ತರದಲ್ಲಿ ಬಂದಾಗ ಇವೊತ್ತು ಉತ್ತರ ಹೇಳ ತಕ್ಕ ಸೌಜನ್ಯತೆ ಈ ಸದನಕ್ಕೆ ತೋರಿಸಬೇಕಾಗಿತ್ತು. ಮಾನ್ಯ ಮುಖ್ಯ ಮಂತ್ರಿಗಳು ಈ ವಿಚಾರದಲ್ಲಿ ಉತ್ತರ ಕೊಡಲಿಕ್ಕೆ ಅವರೇ ಬೇಕು. ಏಕೆಂದರೆ ಇದು ಒಂದನೇ ಸಾರಿ ಪ್ರಶ್ನೆಯಲ್ಲ. ಪೋಲೀಸ್ ಸ್ಟೇಷನ್‌ನಲ್ಲಿ ಏನು ನಡೆಯುತ್ತದೆ, ಆದರ ಬಗ್ಗೆ ನಾವು ಹಿಂದೆ ಎಷ್ಟೋ ಸಾರಿ ಈ ಸದನದಲ್ಲಿ ಎತ್ತಿ ಪ್ರಸ್ತಾಪ ಮಾಡಿದ್ದೇವೆ. ಆದರೆ ಇವೊತ್ತು ಇಲ್ಲಿರತಕ್ಕ ವಿಚಾರ ಏನು ಎಂದು ಹೇಳಿದರೆ, ಒಬ್ಬ ಮನುಷ್ಯನಿಗೆ ಮನೆಗೆ ಹೋಗಿ ಕರೆದುಕೊಂಡು ಬರಬೇಕಾದರೆ, ರಸ್ತೆಯಲ್ಲಿ ತೆಗೆದುಕೊಂಡು ಹೋಗ ಬೇಕಾದರೆ, ಚಪ್ಪಲಿ, ಬೂಟು ಕಾಲಿನಲ್ಲಿ ಹೊಡೆದರೆ ಅದನ್ನು ತಡೆದುಕೊಳ್ಳಲಿಕ್ಕೆ ಆಗುತ್ತದೆಯೇ? ಹಿಂದೆ ನಡೆದಿದ ಅಂದರೆ, ಅದನ್ನು ಯಾರು ಒಪ್ಪುತ್ತಾರೆ. ಹಿಂದೆ ನಡೆದಿದ್ದರೂ ಅದು ತಪ್ಪೇ ಹಿಂದೆ ಮಾಡಿದ್ದಾರೆ. ಈಗ ಈ ಸರ್ಕಾರ ಮಾಡಿಸಬೇಕು ಎಂದು ಹೇಳುತ್ತೀರಾ, ಹಿಂದೆ ಮಾಡಿದ್ದಾರೆ, ಅಂದರೆ, ಹಿಂದಿನ ಹಳೆಯ ಚರಿತ್ರೆ ಅನವಶ್ಯಕ.

ಶ್ರೀ ಕೆ.ಹೆಚ್. ರಂಗನಾಥ್.—ಮನೆಯಿಂದ ದರದರನೆ ಎಳೆದುಕೊಂಡು ಬಂದು ಚಪ್ಪಲಿಯಲ್ಲಿ ಹೊಡೆದುಕೊಂಡು ಬಂದಿರುವುದು ಹಿಂದೆ ಎಂದೂ ನಡೆದಿಲ್ಲ. ೧೯೫೬ನೇ ಇಸವಿಯಿಂದ ಈ ಸಭೆಯ ಕಾರ್ಯಕಲಾಪ ತೆಗೆದು ನೋಡಿದರೆ ಎಂದು ಈ ರೀತಿ ಆಗಿಲ್ಲ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು.—ಹಿಂದೆ ಏನೇನು ನಡೆದಿದೆ ಅದರ ಬಗ್ಗೆ ಒಂದು ದಿವಸ ಬೇಕಾದರೆ ಚರ್ಚೆ ಮಾಡೋಣ.

(ಗೊಂದಲ)

ಶ್ರೀ ಎಸ್ ಸೂರ್ಯನಾರಾಯಣರಾವ್.—ಗುಲ್ಬರ್ಗದಲ್ಲಿ ಜನತಾ ಪಾರ್ಟಿ ಮುಖಂಡರೇ ಇದನ್ನು ಖಂಡಿಸಿದ್ದಾರೆ. ಆದ್ದರಿಂದ ಇದರ ಹಿಂದೆ ರಾಜಕೀಯ ಸಾಕಷ್ಟು ಇದೆ ಎಂದು ಯೋಚನೆ ಮಾಡಬೇಕಾಗುತ್ತದೆ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—೧೯೫೬ನೇ ಇಸವಿಯಿಂದ ಅಷ್ಟೇ ಅಲ್ಲ, ಇನ್ನೂ ಅದರ ಹಿಂದಕ್ಕೆ ಹೋದರೆ ಆಗಲೂ ಇಲ್ಲವೇ ಇಲ್ಲ. ಅವರ ಮನೆಯಲ್ಲಿ ಹೋಗಿ ಅಲ್ಲಿ ಹೊಡೆದು, ರಸ್ತೆಯಲ್ಲಿ ಹೊಡೆದು ಪಬ್ಲಿಕ್‌ನಲ್ಲಿ ಚೈನು, ಹಣ ಕಿತ್ತುಕೊಂಡು ಹೋಗಿದ್ದಾರೆ. ಅನಂತರ ಸ್ಟೇಷನ್‌ಗೆ ಕರೆದುಕೊಂಡು ಹೋಗಿ ಅಲ್ಲಿ ಹೊಡೆದಿದ್ದಾರೆ. ಈ ರೀತಿ ಚಿತ್ರ ಹಿಂಸೆ ಆಗಿರತಕ್ಕದ್ದು ಇದು ಅಮಾನುಷ ಕೌರ್ಯ ಪತ್ರಿಕಾ ಸ್ವಾತಂತ್ರ್ಯದ ಬಗ್ಗೆ ಬರೀ ಭಾಷಣ ಮಾಡಿರತಕ್ಕ ಸರ್ಕಾರ ಇದು. ಚಿತ್ರಹಿಂಸೆ ಆಗಿರತಕ್ಕದ್ದು ಬಹಳ ಅನ್ಯಾಯ. ಬೂಟ್‌ನಲ್ಲಿ ಹೊಡೆದಿರತಕ್ಕದ್ದು ಹಿಂದೆ ಏನಾದರೂ ಆಗಿದೆಯೇ?

(ಗೊಂದಲ)

ಶ್ರೀ ಮಾಣಿಕ್‌ರಾವ್ ಪಾಟೀಲ್.—ಅಧ್ಯಕ್ಷರೆ, ದಯಮಾಡಿ ಎಲ್ಲರಿಗೂ ಅವಕಾಶ ಕೊಡಬೇಕು. ಇದು ಗುಲ್ಬರ್ಗ ಡಿವಿಜನ್‌ನಲ್ಲಿ ಇದು ಆಗುತ್ತಿದೆ. ಇದರ ಬಗ್ಗೆ ಲಘುವಾಗಿ ತೆಗೆದುಕೊಳ್ಳಬಾರದು ಇದರ ಬಗ್ಗೆ ಸಸ್ಪೆಂಡ್ ಮಾಡಿದರೆ ಏನೂ ಆಗುವುದಿಲ್ಲ. It is a question of individual liberty of the citizens of this country it is happening everyday in Gulbarga Thisis not the first time.....

ಅಧ್ಯಕ್ಷರು.—ಇದರ ಜೊತೆಗೆ ಇನ್ನೂ ಕಿರಿಳರ ವಿಚಾರ ಬೇರೆ ಇದೆ. ಅಲ್ಲಿ ಳ ಜನ ಕೊಲೆಯಾಗಿ ದ್ದಾರೆಂದು ಬಂದಿದೆ... ..

೪–೩೦ ಪಿ.ಎಂ.

ಶ್ರೀ ಮಾಣಿಕ್‌ರಾವ್ ಪಾಟೀಲ್.—ನಾವು ಮಾಡಿರತಕ್ಕ ಈ ಸದನದ ನಿಯಮಾವಳಿಗಳು ನಮ್ಮ ಉಪಯೋಗಕ್ಕೆ ಬಂದಿದ್ದರೆ ಇದರಿಂದ ನಮಗೇನು ಪ್ರಯೋಜನ? ಇಂಥ ನಿಯಮಗಳಿಂದ ನಮಗೆ ಏನೂ ಪ್ರಯೋಜನವಿಲ್ಲ. ಆದ್ದರಿಂದ ಇದನ್ನು ಹರಿದು ಹಾಕುವುದು ಒಳ್ಳೆಯದು.

(INTERRUPTION)

MR. SPEAKER.—It shall not go on record.

** **

MR, SPEAKER.—I am confining to rull 334. ತಾವು ನ್ಯಾಯವನ್ನು ಕೇಳ ಬೇಕಾದ ಜನ, ಆದರೆ ತಾವು ನ್ಯಾಯ ಬಾಹಿರವಾಗಿ ನಡೆದುಕೊಳ್ಳಬಾರದೆಂದು ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ತಮ್ಮ ಕಳಕಳಿ ಏನು ಎಂಬುದು ನನಗೆ ಚೆನ್ನಾಗಿ ಅರ್ಥವಾಗಿದೆ. ಆದ್ದರಿಂದಲೇ ರೂಲ್ ೩೩೪ರ ವ್ಯಾಪ್ತಿಯಲ್ಲಿ ಎಷ್ಟು ದೂರ ಈ ವಿಚಾರವನ್ನು ತೆಗೆದುಕೊಂಡು ಹೋಗಬಹುದೋ ಅದಕ್ಕಿಂತಲೂ ಇನ್ನೂ ಹೆಚ್ಚು ಮುಂದಕ್ಕೆ ತೆಗೆದುಕೊಂಡು ಹೋಗಿದ್ದೇವೆ. ಸಭೆಯಲ್ಲಿ ಎಲ್ಲ ಮಾನ್ಯ ಸದಸ್ಯರಿಗೂ ಮಾತನಾಡಲು ಹಕ್ಕಿದೆ ಆದರೆ ಇಲ್ಲಿ ಕೋಪಿಸಿಕೊಳ್ಳುವುದಕ್ಕೆ ಏನು ಅವಕಾಶ ಇದೆ? ತಾವು ಈ ರೀತಿ ನಡೆದುಕೊಳ್ಳುವುದಾದರೆ ನಾನು ಈ ಸಭೆಯನ್ನು ನಡೆಸುವುದು ಬಹಳ ಕಷ್ಟವಾಗುತ್ತದೆ There are half a dozen issues to be taken up and they are before the House. If the House decides that all those matters should be discussed I have no objection. This is one thing On the other hand I have to go by rules.

ಶ್ರೀ ಎನ್. ಚಿಕ್ಕೇಗೌಡ.—ಸ್ವಾಮಿ, ಇದು ಬಹಳ ಸೆನ್ಸಿಟಿವ್ ಕ್ವೆಶ್ಚನ್ ಆದ್ದರಿಂದ.....

ಅಧ್ಯಕ್ಷರು.—ಇದರಲ್ಲಿ ಯಾವುದು ಸೆನ್ಸಿಟಿವ್ ಅಲ್ಲ. ಈಗ ಸಭೆಯ ಮುಂದಿರುವುದು ಸೆನ್ಸಿಟಿವ್ ಅಲ್ಲ ಎಂದು ತಾವು ಹೇಗೆ ಹೇಳುತ್ತೀರಿ?

ಶ್ರೀ ಕೆ. ಹೆಚ್. ರಂಗನಾಥ್.—ಆದ್ದರಿಂದಲೇ ನಾನು ಹೇಳಿದ್ದು. ಈ ವಿಷಯವನ್ನು ರೂಲ್ ೬೮ರ ಕೆಳಿಗೆ ತೆಗೆದುಕೊಂಡರೆ ಮಾನ್ಯ ಸದಸ್ಯರು ಹೆಚ್ಚು ಮಾತನಾಡಲು ಅವಕಾಶ ಇರುತ್ತದೆ ಎಂದು.

ಶ್ರೀ ಪಿ. ರಾಮದೇವ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಆ ರೀತಿ ವರ್ತನೆ ಮಾಡಿದ್ದು ಸರಿಯೆ ?

ಶ್ರೀ ಕೆ. ಜಿ. ಮಹೇಶ್ವರಪ್ಪ.—ಅವರು ಸದಗದ ನಿಯಮಾಳಿಯ ಪುಸ್ತಕವನ್ನು ಹರಿದುಹಾಕಿದ್ದು ಸರಿಯೇ ಸ್ವಾಮಿ ?

(INTERRUPTION)

MR. SPEKARER :Don't record

† ಶ್ರೀ ಪಿ. ರಾಮದೇವ್.— ಮಾನ್ಯ ಅಧ್ಯಕ್ಷರೆ,* ನನ್ನದೊಂದು *ಪಾಯಿಂಟ್ ಆಫ್ ಆರ್ಡರ್. ಮಾನ್ಯ ಸದಸ್ಯರಾದ ಮಾಣಿಕ್‌ರಾವ್ ಪಾಟೀಲ್‌ರವರು ಎಷ್ಟು ಬೇಕಾದರೂ ಮಾತನಾಡಲಿ. ನಾವು ಯಾರೂ ಕೂಡ ಬೇಡ ಎಂದು ಹೇಳುವುದಿಲ್ಲ. ಆದರೆ ಈ ರೀತಿ ಸದನಕ್ಕೆ ಅಪಮಾನ ಆಗುವ ತರಹದಲ್ಲಿ ನಿಯಾಮಾವಳಿಯ ಪುಸ್ತಕವನ್ನು ಹರಿದು ತಮ್ಮ ಕಡೆ ಎಸೆದಿದ್ದು ಸರಿಯೆ ? as it in keeping the with dignity of the House .....

ಶ್ರೀ ಧರ್ಮಸಿಂಗ್.—ಮಾನ್ಯ ಅಧ್ಯಕ್ಷರೆ....

(INTERRUPTION)

MR. SPEAKER Don't record.

ಶ್ರೀ ಪಿ. ರಾಮದೇವ್.—ನೀವು ಪತ್ರಿಕಾ ಸ್ವಾತಂತ್ರವನ್ನು ಹೇಳುವುದಕ್ಕೆ ಏನು ಹಕ್ಕಿದೆ.

(ಗೊಂದಲ)

** A ordered by the Chair the matter was not recorded

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೆ, ಈ ವಿಷಯದ ತೀವ್ರತೆಯ ಬಗ್ಗೆ ಯಾರೂ ಕೂಡ ಪ್ರಶ್ನೆ ಮಾಡುವುದಿಲ್ಲ. ಮಾನ್ಯ ಸದಸ್ಯರು ಯಾರೇ ಆಗಲಿ ತಮ್ಮ ಅನುಮತಿಯನ್ನು ಕೋರಿ ಕಾನೂನು ಚೌಕಟ್ಟಿನಲ್ಲಿ ಅವರ ಅಭಿಪ್ರಾಯಗಳನ್ನು ಹೇಳುವ ಹಕ್ಕು ಇದೆ. ಆದರೆ ಮಾನ್ಯ ಸದಸ್ಯರಾದ ಮಾಣಿಕ್ಯರಾವ್ ಪಾಟೀಲ್‌ರವರು ಈ ಸದನದ ನಿಯಮಾವಳಿಯ ಪುಸ್ತಕವನ್ನು ಹರಿದುಹಾಕಿ ನಡೆದು ಕೊಂಡಿರತಕ್ಕ ನಡೆತೆಗೆ ತಾವು ಅವಕಾಶವನ್ನು ಕೊಡಬಾರದು. ಕಾನೂನು ರೀತಿಯಲ್ಲಿ ಅವರ ನಡೆತೆಯ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ನಾನು ತಮ್ಮಲ್ಲಿ ಮನವಿಮಾಡಿಕೊಳ್ಳುತ್ತೇನೆ.

(ಗೊಂದಲ)

SRI K. H. RANGANATH.—Are you going to move a motion. Yes you can move amotion.....

ಅಲ್ಲಿ ಪೋಲಿಸ್ ಸ್ಟೇಷನ್‌ನಲ್ಲಿ ಈ ರೀತಿ ವರ್ತನೆ ಮಾಡಿದ್ದಾರೆಂಬುದನ್ನು ಸ್ವಲ್ಪ ಉದ್ವೇಗದಲ್ಲಿ ಹೇಳಿ, ನಾವು ಮಾಡಿರತಕ್ಕ ಕಾನೂನುಗಳು ನಮ್ಮ ಉಪಯೋಗಕ್ಕೆ ಬರದಿದ್ದರೆ ಇದರಿಂದ ಏನು ಪ್ರಯೋಜನ ಎನ್ನುವ ಅರ್ಥ ಬರುವ ರೀತಿಯಲ್ಲಿ ಅವರು ಮಾತನಾಡಿದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೆ, ಸದಸ್ಯರಾದ ರಂಗನಾಥ್‌ರವರು...

(ಗೊಂದಲ)

ಶ್ರೀ ಕೆ. ಹೆಚ್. ರಂಗನಾಥ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಏನಾದರೂ ಸಲಹೆ ಕೊಡಬಹುದು ಎಂದು ಅಂದುಕೊಂಡಿದ್ದೆ. ಆದರೆ ಅದಕ್ಕೆ ಬದಲು ಇವರು ಕಡ್ಡಿ ಹಚ್ಚಿ ಬೆಂಕಿ ಇಡುತ್ತಿದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಅವರು ಪುಸ್ತಕವನ್ನು ಹರಿದು ಹಾಕಿದ್ದಾರೆ...

MR. SPEAKER.—When the Member has said that he did not intend to show any disrespect to the Chair, please conclude that, Let us go to the next item.

ಮಾನ್ಯ ಬಂಗಾರಪ್ಪನವರೆ, ರೂಲ್ ೩೫ಕ್ಕಿಂತ ಕೆಳಗೆ ಮಾತನಾಡುವುದಕ್ಕೆ ತಮಗೆ ಬಿಟ್ಟಿದ್ದೇನೆ... ತಾವು ಎಷ್ಟು ಮಾತನಾಡಬೇಕೋ ನೀವೇ ನಿರ್ಧರಿಸಿ...

ಶ್ರೀ ಎಸ್. ಬಂಗಾರಪ್ಪ.—ಇವರು ಎಲ್ಲಿಯವರೆಗೆ ಇದೇರೀತಿ ನಡೆದುಕೊಂಡು ಹೋಗುತ್ತಾರೋ ಅಲ್ಲಿಯವರೆಗೂ ನಾವೂ ಕೂಡ ಇದನ್ನೇ ಮುಂದುವರಿಸಿಕೊಂಡು ಹೋಗಬೇಕಾಗುತ್ತವೆ. ಇದಕ್ಕೆ ಬೇರೆ ದಾರಿಯೇ ಇಲ್ಲ.

ಅಧ್ಯಕ್ಷರು.—ಶಾಸನದಲ್ಲಿ ಇದಕ್ಕೆ ಬೇರೆ ದಾರಿ ಇದೆ. ಅದನ್ನು ಉಪಯೋಗಿಸಿ.

ಶ್ರೀ ಎಸ್. ಬಂಗಾರಪ್ಪ.—ಇವರು ಒಬ್ಬ ಸದಸ್ಯರನ್ನು ಸಸ್ಪೆಂಡ್ ಮಾಡುವ ಮಟ್ಟಕ್ಕೆ ಹೋಗಿದ್ದಾರೆ. ಒಬ್ಬ ಪೋಲೀಸ್ ಆಫೀಸರ್‌ನ್ನು ಸಸ್ಪೆಂಡ್ ಮಾಡುವುದಕ್ಕೆ ಇವರ ಹಣೆ ಬರಹದಲ್ಲಿ ಆಗಿಲ್ಲ. ಅಂಥಾದ್ದರಲ್ಲಿ ಇವರು ಒಬ್ಬ ಸದಸ್ಯರನ್ನು ಸಸ್ಪೆಂಡ್ ಮಾಡುತ್ತಾರಂತೆ.

(ಗೊಂದಲ)

MR. SPEAKE.—I request Sri Bangarappa to conclude. How long can we go onlike this?

ಶ್ರೀ ಮಹದೇವ್.—ಒಬ್ಬ ಪೋಲೀಸ್ ಕಾನ್‌ಸ್ಟೇಬಲ್‌ನ್ನು ಸಸ್‌ಪೆಂಡ್ ಮಾಡಲಿಕ್ಕೆ ಆಗುತ್ತದೆ ಆದರೆ ಒಬ್ಬ ಪೋಲೀಸ್ ಆಫೀಸರನ್ನು ಸಸ್‌ಪೆಂಡ್ ಮಾಡಲಿಕ್ಕೆ ಆಗುವುದಿಲ್ಲ. ಇದೇ ಇವರ ಕೆಪ್ಯಾಸಿಟಿ.

ಶ್ರೀ ಎಸ್. ಬಂಗಾರಪ್ಪ.—ಸ್ಟೇಷನ್ ಒಳಗಡೆ ಹೊಡೆಯುವುದನ್ನು ಕೇಳಿದ್ದೇನೆ, ಆದರೆ ಬೀದಿಯಲ್ಲಿ ಮೆರವಣಿಗೆ ಮಾಡಿ ಕೈಗೆ ಕೊಳ ತೊಡಿಸಿ ಮೆರವಣಿಗೆ ಮಾಡಿರುವುದು...

ಶ್ರೀ ಕೆ. ಜಿ. ಮಹೇಶ್ವರಪ್ಪ;—ಇವರು ಏನು ಹೇಳುತ್ತಿದ್ದಾರೆ...

ಶ್ರೀ ಬಿ. ಎಸ್. ಯಡಿಯೂರಪ್ಪ.— ಅನವಶ್ಯಕವಾಗಿ ಮಹೇಶ್ವರಪ್ಪನವರು ಏತಕ್ಕೆ ಮಧ್ಯೆ ಪ್ರವೇಶ ಮಾಡುತ್ತಾರೆ. ಈ ರೀತಿಯಾದರೆ ಬಗೆಹರಿಯುವುದಿಲ್ಲ. ಯಾವ ಸರ್ಕಾರದವರೂ ಬಂದರೂ ಪೋಲೀಸಿನವರ ವರ್ತನೆ ಇದೇ ರೀತಿ ಇರುತ್ತದೆ.

ಶ್ರೀ ಎಸ್. ಬಂಗಾರಪ್ಪ.— ಮಹೇಶ್ವರಪ್ಪನವರು ಸುಮ್ಮನಿದ್ದರೆ ನಾನು ನನ್ನ ಮಾತನ್ನು ಮುಗಿಸಿಬಿಡುತ್ತೇನೆ. ಸಾವಿರಾರು ಜನರ ಎದುರಿಗೆ ಹೊಡೆದು ಕೈಗೆ ಕೊಳ ಹಾಕಿಕೊಂಡು ಮೆರವಣಿಗೆ ಮಾಡಿರುವುದಕ್ಕೆ ಬೇರೆ ಹಿನ್ನೆಲೆ ಇರಲೇಬೇಕು. ಇದು ಸುಮ್ಮ ಸುಮ್ಮನೆ ಇಷ್ಟು ಬಂದ ಹಾಗೆ ಹೊಡೆದರು ಎಂಬ ಪ್ರಶ್ನೆ ಅಲ್ಲ. ಅದು ಬೇರೆ ಪ್ರಶ್ನೆ. ಇದು ಉದ್ದೇಶಪೂರ್ವಕವಾಗಿ ಮಾನ ಮರ್ಯಾದೆಯನ್ನು ತೆಗೆದ ಅವಾಚ್ಯ ಶಬ್ದಗಳನ್ನು ಉಪಯೋಗಿಸಿ ಚಪ್ಪಲಿ ಬೂಟಿನಿಂದ ಹೊಡೆದು ಕೈಕೊಳ ಹಾಕಿ ಮೆರವಣಿಗೆ ಮಾಡಿರುವುದಕ್ಕೆ ಬೇರೆ ಹಿನ್ನೆಲೆ ಇದೆ. ಇದರಲ್ಲಿ ರಾಜಕೀಯ ಶಕ್ತಿಯ ಕೈವಾಡ ಅಡಗಿದೆ ಎಂದು ಸ್ಪಷ್ಟವಾಗಿ ಹೇಳುತ್ತೇನೆ. ಆ ರಾಜಕೀಯ ಶಕ್ತಿಗೆ ಏನು ಅಧಿಕಾರ ಇದೆ. ಆ ಅಧಿಕಾರದ ದರ್ಪದ ಅಡಿಯಲ್ಲಿ ಇದು ಹುಟ್ಟಿ ಮುಂದೆ ಸಾಗಿದೆ ಯಾವುದೋ ಮ್ಯಾಜಿಸ್ಟೀರಿಯಲ್ ಎನ್‌ಕ್ವಯರಿ ಅಥವಾ ಡಿಪಾರ್ಟ್‌ಮೆಂಟಲ್ ಎನ್‌ಕ್ವಯರಿಯಿಂದ ಇದು ಬಗೆಹರಿಯುವುದಿಲ್ಲ. ನ್ಯಾಯಾಂಗ ವಿಚಾರಣೆ ಆದರೆ ಮಾತ್ರ ಸತ್ಯ ಹೊರಬೀಳುತ್ತದೆ. ನಾನು ಎಲ್ಲ ವಿಷಯಕ್ಕೂ ನ್ಯಾಯಾಂಗ ವಿಚಾರಣೆಯನ್ನು ಕೇಳುವುದಿಲ್ಲ. ಆದರೆ ಇಲ್ಲಿ ನ್ಯಾಯಾಂಗ ವಿಚಾರಣೆ ಮಾಡದಿದ್ದರೆ ವಾಸ್ತಾವಾಂಶವನ್ನು ಹೊರತರಲು ಸಾಧ್ಯವಾಗುವುದಿಲ್ಲ. ಈವತ್ತು ಇವರು ಹೇಳಿಕೆಯನ್ನು ಇಡಬೇಕಾದರೆ ಆ ಅಧಿಕಾರಿಯ ಮೇಲೆ ಏನು ಕ್ರಮ ತತ್‌ಕ್ಷಣ ತೆಗೆದುಕೊಂಡಿದ್ದಾರೆ ಎಂಬ ಅಂಶವು ನಮಗೆ ಗೊತ್ತಾಗಬೇಕು. ಅಲ್ಲದೆ ಯಾವ ರೀತಿ ವಿಚಾರಣೆ ಮಾಡುತ್ತೀರಿ ಎಂಬ ವಿಚಾರವನ್ನು ತಿಳಿಸಬೇಕು. ಹಾಗೂ ಮಾನ್ಯ ಮುಖ್ಯಮಂತ್ರಿಗಳು ಇಲ್ಲಿಗೆ ಬರಬೇಕು. ಇಲ್ಲದಿದ್ದರೆ ಈ ವಿಚಾರ ಬಗೆಹರಿಯುವ ವಿಚಾರವೇ ಅಲ್ಲ. ಮತ್ತು ನಾವು ಇವರ ಉತ್ತರವನ್ನು ಕೇಳಲು ಯಾರಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.— ಸಾರ್...

ಶ್ರೀ ಎಂ. ವೀರಪ್ಪಮೊಯಿಲಿ.— ಮುಖ್ಯಮಂತ್ರಿಗಳನ್ನು ಕರೆಸುವುದು ಒಳ್ಳೆಯದು. ಮೊನ್ನೆ ಅವರು ಉತ್ತರವನ್ನು ಕೊಡುವಾಗ ರಾಜ್ಯ ಸಚಿವರು ಇರಲಿಲ್ಲ. ಇಷ್ಟು ದೊಡ್ಡ ವಿಚಾರ ಇಲ್ಲಿ ಪ್ರಸ್ತಾಪವಾಗುತ್ತಿರುವಾಗ ದಯವಿಟ್ಟು ಮುಖ್ಯಮಂತ್ರಿಯವರಿಗೆ ಹೇಳಿ ಕಳುಹಿಸಿ.

ಶ್ರೀ ಎಂ. ಮಲ್ಲಿಕಾರ್ಜುನಖಾರ್ಗೆ.— ಶ್ರೀಮಾನ್ ಧರ್ಮಸಿಂಗ್‌ರವರು ಹಾಗೂ ಶ್ರೀ ಬಂಗಾರಪ್ಪನವರು ಇದರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ ಈ ವಿಚಾರ ಬಹಳ ಮಹತ್ವವಾದದು. ರಾಜ್ಯ ಮಂತ್ರಿಗಳ ಬಗ್ಗೆ ನಮಗೆ ಗೌರವವಿದೆ. ಅವರ ಸ್ಟೇಟ್‌ಮೆಂಟನ್ನು ಕೇಳಬಾರದು ಎಂಬ ದೃಷ್ಟಿಯಿಂದ ನಾನು ಹೇಳುತ್ತಿಲ್ಲ. ಇದರಲ್ಲಿ ಅನೇಕ ವಿಷಯಗಳು ಅಡಗಿವೆ. ಯಾವ ಹಿನ್ನೆಲೆಯಲ್ಲಿ ಈ ಕ್ರಾಂತಿ ಪತ್ರಿಕೆಯ ಸಂಪಾದಕರಿಗೆ ಹೊಡೆದಿದ್ದಾರೆ. ಬ್ರಹ್ಮಪುರ ಸ್ಟೇಷನ್‌ನಲ್ಲಿ ಮತ್ತು ಈ ಯಾವ ರಾಜಕೀಯ ಶಕ್ತಿ ಇದರ ಹಿಂದೆ ಇದೆ, ಮತ್ತು ಯಾವ ಜನ ಇದರ ಹಿಂದೆ ಇದ್ದಾರೆ ಎಂಬುದನ್ನೆಲ್ಲಾ ನಾವು ತಿಳಿಬೇಕಾಗಿದೆ. ಈ ಇನ್‌ಸಿಡೆಂಟ್ ಆದ ಮೇಲೆ ಪುನಃ ಬೆಂಗಳೂರಿಗೆ ಕಾಂಟ್ಯಾಕ್ಟ್ ಮಾಡಿ ಯಾರು ಹೇಳಿದ್ದಾರೆಂಬ ವಿವರವನ್ನು ತಿಳಿಸಬೇಕಾಗಿದೆ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಯವರು ಇಲ್ಲಿ ಹಾಜರಾಗಲೇಬೇಕಾಗಿದೆ. ಅವರು ಬಂದರೆ ಮುಂದೆ ಇಂಥ ಅನ್ಯಾಯ ಅತ್ಯಾಚಾರಗಳು ಆಗುವುದನ್ನು ನಿಲ್ಲಿಸಬಹುದು. ಬರೆ ಸಮಾಧಾನಕ್ಕಾಗಿ ಒಂದು ಸ್ಟೇಟ್‌ಮೆಂಟ್ ಓದಬಹುದು. ಮತ್ತೆ ನಾವು ಕೆಲವು ಕ್ಲಾರಿಫಿಕೇಶನ್ ಕೇಳಬಹುದು. ಆದರೆ ಅದರಿಂದ ಇದಕ್ಕೆ ಪರಿಹಾರ ಸಿಕ್ಕುವುದಿಲ್ಲ.

ಅಧ್ಯಕ್ಷರು.— ಹಿಂದಿನ ಕೆಳಗೆ ಕ್ರಾಂತಿ ಪತ್ರಿಕೆಗೆ ಸಂಬಂಧಪಟ್ಟಿದ್ದನ್ನು ಮಾತ್ರ ಹೇಳಿ ಉಳಿದ ವಿಚಾರವನ್ನು ಇಲ್ಲಿ ಹೇಳಲು ಸಾಧ್ಯವಾಗುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.— ನಾವು ಜ್ಯುಡಿಷಿಯಲ್ ಇನ್‌ಕ್ವೈರಿ ಕೇಳುತ್ತಿದ್ದೇವೆ. ಯಾರು ಅನ್ಯಾಯ ಮಾಡಿದ್ದಾರೆ. ಸಬ್‌ಇನ್‌ಸ್ಪೆಕ್ಟರ್ ಸರ್ಕಲ್ ಇನ್‌ಸ್ಪೆಕ್ಟರನ್ನು ಸಸ್‌ಪೆಂಡ್ ಮಾಡಬೇಕು. ಯಾವರಾಜಕಾರಣಿಗಳು ಇದರಲ್ಲಿ ಕೈವಾಡ ಮಾಡಿದ್ದಾರೆ ಅವರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಎಂ. ಮಲ್ಲಿಕಾರ್ಜುನಖಾರ್ಗೆ.— ಮುಖ್ಯಮಂತ್ರಿಗಳನ್ನು ಕರೆಸಲೇಬೇಕು.

MR. SPEAKER-- I cannot force.

ಶ್ರಿ ಎಸ್. ಮಲ್ಲಿಕಾರ್ಜುನಖಾರ್ಗೆ.-- ನೀವು ಫೋರ್ಸ್ ಮಾಡಿ ಕರೆಸಿ.

ಶ್ರೀ ಎಸ್. ಬಂಗಾರಪ್ಪ.-- ನಾವು ಇವರ ಉತ್ತರವನ್ನು ಕೇಳುವುದಕ್ಕೆ ತಯಾರಾಗಿಲ್ಲ ಸರ್ಕಾರವರು ಸಹ ಇದನ್ನು ಅರ್ಥ ಮಾಡಿಕೊಳ್ಳಬೇಕು. ಎಷ್ಟು ಹೊತ್ತಿನಿಂದ ಈ ಸದನದಲ್ಲಿ ಕುಳಿತು ಕೊಂಡಿದ್ದೇವೆ. ಅವರು ಎಷ್ಟು ಹೊತ್ತು ಕುಳಿತುಕೊಂಡಿದ್ದಾರೆ ಎಂಬುದನ್ನು ತಿಳಿದುಕೊಳ್ಳಬೇಕು.

ಶ್ರೀ ಎಮ್. ಮಲ್ಲಿಕಾರ್ಜುನ ಖಾರ್ಗೆ.-- ಪಿ.ಡಬ್ಲ್ಯೂಡಿ ಡಿಮ್ಯಾಂಡ್ ನಡೆಯುತ್ತಿದ್ದಾಗ ನಾನೂ ಇದರ ಬಗ್ಗೆ ಪ್ರಸ್ತಾಪ ಮಾಡಿದೆ. ಅದರ ಬಗ್ಗೆ ಸವಿಸ್ತಾರವಾಗಿ ಉತ್ತರವನ್ನು ಸೋಮವಾರ ಕೊಡುತ್ತೇವೆಂದು ಹೇಳಿದರು. ಆದ್ದರಿಂದ ಮುಖ್ಯಮಂತ್ರಿಗಳು ಇಲ್ಲಿ ಇರಬೇಕಾಗಿತ್ತು. ೧೧-೩೦ಕ್ಕೆ ನನ್ನ ಪತ್ರಿಕೆಯನ್ನು [illegible]ವಂತು ಕಾಗದವನ್ನು [illegible]ಕೊಟ್ಟಿದ್ದೇನೆ. ಈ ಸದನಕ್ಕೆ ಅಲಕ್ಷ್ಯ ಮಾಡಿದೆ ಎಂಬ ಅನುಮಾನ ನನಗೆ ಬರುತ್ತದೆ...

MR. SPEAKER.-- Why should we draw inferences?

ಶ್ರೀ ಎಂ. ಮಲ್ಲಿಕಾರ್ಜುನಖಾರ್ಗೆ.-- ಅವರಿಗೆ ಈ ವಿಷಯ ಗೊತ್ತಿದೆ, ನಾನು ನೋಟೀಸ್ ಕೊಟ್ಟಿದ್ದೇನೆ. ಪತ್ರಿಕೆ ಕೂಡ ಕೊಟ್ಟಿದ್ದೇನೆ. ಪೊನ್ನೆ ಈ ಪ್ರಶ್ನೆಯನ್ನು ಎತ್ತಿದ್ದೇನೆ, ಇಷ್ಟಾದರೂ ಕೂಡ ಅವರು ಬರದಿದ್ದರೆ ಅವರು ಅಲಕ್ಷ ಮಾಡಿದ್ದಾರೆಂದು ತಿಳಿದುಕೊಳ್ಳಬೇಕಾಗುತ್ತದೆ. ಅವರಿಗೆ ಆಸಕ್ತಿ ಇ ಎಂಬ ಅಭಿಪ್ರಾಯವೂ ಬರುತ್ತದೆ.

ಅಧ್ಯಕ್ಷರು.-- ಮಾನ್ಯ ಮಂತ್ರಿಗಳು ಉತ್ತರ ಹೇಳಲಿ. ನೋಡೋಣ.

SRI. S. BANGARAPPA.-- We are not prepared.

ಶ್ರೀ ಎ. ಲಕ್ಷ್ಮೀಸಾಗರ್.-- ಮಾನ್ಯ ಅಧ್ಯಕ್ಷರೇ...

SRI DHARMA SING.-- I am on a point of order.

ಈಗ ಮಂತ್ರಿಯವರು ಓದಬೇಕೆಂದಿರುವ ವರದಿ ನಾವು ಇಲ್ಲಿ ವಿವರಗಳನ್ನು ಕೊಡುವುದಕ್ಕಿಂತ ಮುಂಚೆ ತಯಾರಾಗಿರುವುದು. ಆದರಿಂದ ಏನು ಪ್ರಯೋಜನವಾಗುವುದಿಲ್ಲ. ಶ್ರೀ ಖಾರ್ಗೆಯವರು ಸ್ವಳಕ್ಕೆ ಹೋಗಿಬಂದಿದ್ದಾರೆ. ಆದ್ದರಿಂದ ಪೂರ್ಣ ಮಾಹಿತಿಯುಳ್ಳ ವರದಿಯನ್ನು ಮುಖ್ಯಮಂತ್ರಿ ಯವರು ಮಾಡಬೇಕು. ಇದೇ ನನ್ನ ಪಾಯಿಂಟ್ ಆಫ್ ಆರ್ಡರ್.

MR. SPEAKER.-- It is a point of disorder.

ಶ್ರೀ ಎ. ಲಕ್ಷ್ಮೀಸಾಗರ್.—ಈ ಖಾತೆಗೆ ಸಂಬಂಧಪಟ್ಟ ಮಂತ್ರಿಗಳು ಇದ್ದಾರೆ ವಿವರಗಳನ್ನು ಅವರು ತರಿಸಿ ಕೊಡುತ್ತಾರೆ. ತಮ್ಮ ಹೇಳಿಕೆಯನ್ನು ತಯಾರು ಮಾಡಿಕೊಂಡು ಸದನಕ್ಕೆ ಒಪಿಸಲಿಕ್ಕೆ ಬಂದಿದ್ದಾರೆ. ಹೇಳಿಕೆ ಕೊಡಿ ಎಂದರೆ ಇನ್ನೂ ಹೆಚ್ಚಿನ ವಿವರಗಳನ್ನು ಮಾನ್ಯ ಸದಸ್ಯರಿಗೆ ತಮ್ಮ ಅಭಿ ಪ್ರಾಯದ ಮೇಲೆ ವ್ಯಕ ಪಡಿಸುವ ಮೂಲಕ ಅವುಗಳನ್ನು ತರಿಸಿಕೊಡುವ ವ್ಯವಸ್ಥೆ ಮಾಡಲಾಗುತ್ತದೆ. ಸರ್ಕಾರದ ಹೇಳಿಕೆ ಏನಿದೆ ಮಾತ್ರ ಇದರ ಹಿನ್ನೆಲೆ ಏನಿದೆ ಎಂಬುದನ್ನು ಮಾನ್ಯ ಸದಸ್ಯರು ಟೊದಲು ಗಮನಕ್ಕೆ ತೆಗೆದುಕೊಳ್ಳದೆ ಪೂರ್ವಭಾವಿಯಾಗಿ ಅವರೇ ಯೋಚನೆ ಮಾಡಿಕೊಂಡು ಕಲ್ಪನಾಲೋಕದ ತಿಳಿವಳಿಕೆಯಿಂದ ಮಾತನಾಡಿದರೆ...

(ಗ ಲಾ ಟೆ)

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಈಗ ಏನಾಗಿದೆ ಎಂದರೆ...

ಅಧ್ಯಕ್ಷರು.—ಈಗ ಮುಖ್ಯಮಂತ್ರಿಗಳನ್ನು ಕರೆಸಬೇಕೋ ಅಥವಾ ಕ್ರಾಂತಿ ಪತ್ರಿಕೆಯ ಸಂಪಾದಕರ ವಿಷಯವನ್ನು ನಾವು ತಿಳಿದುಕೊಳ್ಳಬೇಕೋ ?

ಶ್ರಾ ಎಂ. ಮಲ್ಲಿಕಾರ್ಜುನ ಖಾರ್ಗೆ.—ಮೊದಲು ತಾವು ಮುಖ್ಯ ಮಂತ್ರಿಗಳನ್ನು ಕರೆಸಬೇಕು.

ಶ್ರೀ ಎಂ. ವೀರಪ್ಪಮೊಯ್ಲಿ.—ತಾವು ನನಗೆ ಸಹಾಯಕ್ಕೆ ಬರಬೇಕು ಈ ಸದನದ ಕಾರ್ಯಕಲಾಪ ಗಳನ್ನು ಸುಸೂತ್ರವಾಗಿ ನಡೆಸಿಕೊಂಡು ಹೋಗಲು ನಮ್ಮ ಸಹಕಾರವಿದೆ. ಇದರಲ್ಲಿ ರಾಜಕೀಯ ಮಾಡ ಬೇಕೆಂಬ ಉದ್ದೇಶವೇನೂ ನಮಗಿಲ್ಲ. ಈ ಘಟನೆಯ ಬಗ್ಗೆ ಗುಲ್ಬರ್ಗ ಜನತಾ ಪಕ್ಷದ ಜಿಲ್ಲಾ

ಸಮಿತಿಯೂ ಸಹ ಖಂಡಿಸಿದೆ. ಮಾನ್ಯ ಮಹೇಶ್ವರಪ್ಪನವರು ಮಾತನಾಡುವಾಗ ಒಂದು ಘಾತನ್ನು ಹೇಳಿದರು. ಅದರೆ ಇದರ ಬಗ್ಗೆ ರಾಜಕೀಯ ಮಾಡಬೇಕೆಂದು ಯಾರೂ ವಿಚಾರ ಮಾಡಿಲ್ಲ. ಪತ್ರಿಕಾ ಸ್ವಾತಂತ್ರ್ಯ ವಿರಬೇಕೆಂದು ಹೇಳುವಾಗ ಒಂದು ಪತ್ರಿಕೆಯ ಸಂಪಾದಕರನ್ನು ಪೋಲೀಸರಂ ಕರೆದುಕೊಂಡು ಹೋಗುವಾಗ ದಾರಿಯಲ್ಲಿಯೇ ಅವರನ್ನು ಹೊಡೆದಿರುವುದನ್ನು ನೋಡಿದರೆ, ಮಾನ್ಯ ರಂಗನಾಥ್ ಅವರು ಹೇಳಿದಂತೆ ಇಂತಹ ಪ್ರಸಂಗ ಕರ್ನಾಟಕದ ಇತಿಹಾಸದಲ್ಲಿಯೇ ನಡೆದಿಲ್ಲವೆಂದು ಹೇಳಬಹುದು. ಇದು ಗಂಭೀರವಾದಂಥ ವಿಚಾರ ಮತ್ತು ಇದರ ಹಿನ್ನೆಲೆಯಲ್ಲಿ ರಾಜಕೀಯ ಶಕ್ತಿಯ ಕೈವಾಡವಿದೆ ಎಂದು ಸನ್ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಇಂತಹ ವಿಚಾರದಲ್ಲಿ ಗೃಹ ಖಾತೆ ರಾಜ್ಯ ಮಂತ್ರಿಗಳು ಉತ್ತರ ಕೊಟ್ಟರೆ ಸಾಕು ಎಂದರೆ ಹೇಗೆ ? ತಾವೂ ಕೂಡ ಹಿರಿಯರಿದ್ದೀರಿ ಮತ್ತು ಅನುಭವ ಹೊಂದಿದವರಾಗಿದ್ದೀರಿ. ಆದ್ದರಿಂದ ನಾವು ಇಲ್ಲಿ ನಿಯಮಾವಳಿ ಒಂದನ್ನೇ ನೋಡದೆ ಸದಸ್ಯರ ಘನಸ್ಸಿನಲ್ಲಿರುವ ಕಳವಳ ಹಾಗೂ ಕುತೂಹಲವನ್ನು ಸಹ ನೋಡಿಕೊಂಡು ಕೆಲಸ ಮಾಡಬೇಕಾಗುತ್ತದೆ. ಮಾನ್ಯ ಗೃಹ ಮಂತ್ರಿಗಳು ಇದಕ್ಕೆ ಉತ್ತರ ಕೊಡುತ್ತಾರೆಂದರೆ ಕೆಲಸವಾಗುವುದಿಲ್ಲ. ತಾವು ಮುಖ್ಯ ಮಂತ್ರಿಗಳನ್ನು ದಯ ಮಾಡಿ ಕರೆಸಬೇಕು. ಅವರಿಗೆ ಈಗ ಬರಲು ಸಮಯವಿಲ್ಲದಿದ್ದರೆ ಸಮಯ ಕೊಡಿ. ಈಗಲೇ ಉತ್ತರ ಕೊಡಬೇಕೆಂದು ನಾವು ಹೇಳುವುದಿಲ್ಲ. ಆದರೆ ನಮಗೆ ಸರಿಯಾದ ಉತ್ತರ ಬೇಕು. ಮಾನ್ಯ ಕಾನೂನು ಮಂತ್ರಿಗಳು ಮಾತನಾಡುವಾಗ ಗೃಹಖಾತೆ ರಾಜ್ಯಮಂತ್ರಿಗಳು ಉತ್ತರ ಕೊಟ್ಟ ಮೇಲೆ ಇನ್ನೂ ಹೆಚ್ಚಿನ ವಿವರಗಳ ಅವಶ್ಯಕತೆ ಇದ್ದರೆ ತರಿಸಿಕೊಡುವುದಾಗಿ ಹೇಳಿದರು. ಅಂದರೆ ಈಗ ಸರ್ಕಾರದ ಹತ್ತಿರ ಸಮರ್ಪಕವಾದ ಉತ್ತರ ಇಲ್ಲವೆಂದು ಅರ್ಥವಾಯಿತು. ಅದ್ದರಿಂದ ಇಂತಹ ಪೂರಕವಲ್ಲದ ಉತ್ತರ ವನ್ನು...

SRI A. LAKSHMI SAGAR.—I totally deny such e thing. How do you envisage as to what he is going to say ? How do you predict ? There is no point in arguing like this. You cannot predict, what the Home Minister is going to say, Where is the end for this ? Mr. Speaker Sir, there is no logic in it, There is no point in what he is going to say.

MR. SPEAKER.—In know that the Chief Minister has said that he has got some personal inconvenience. That is why I said let him make a statement. Again, if you went any charifications, we can take it up tomorrow.

ಶ್ರೀ ಧರ್ಮಸಿಂಗ್.—ಅದು ಸಾಧ್ಯವಿಲ್ಲ. ಮುಖ್ಯಮಂತ್ರಿಗಳೇ ಬಂದು ಹೇಳಿಕೆ ಕೊಡಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ನನ್ನದೊಂದು ಕ್ರಿಯಾಲೋಪವಿದೆ. ಏನೆಂದರೆ ಈ ಖಾತೆಗೆ ಸಂಬಂಧಪಟ್ಟ ಮಂತ್ರಿಗಳು ಪೂರ್ಣ ಜವಾಬ್ದಾರಿಯಿಂದ ಈ ವಿಷಯದ ಮೇಲೆ ಹೇಳಿಕೆ ಕೊಡುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಇದರ ಬಗ್ಗೆ ನಾನು ಸಹ ಮಾತನಾಡಿದ್ದೇನೆ. ಆದರೆ ಮಾನ್ಯ ಸದಸ್ಯರು ಬೇರೆ ಸಮಯದಲ್ಲಿ ಹೇಗಾದರೂ ಇರಲಿ, ಆದರೆ ಈ ಸಮಯದಲ್ಲಿ ಮುಖ್ಯಮಂತ್ರಿಗಳೇ ಇರಬೇಕೆಂದು ಹೇಳುತ್ತಿದ್ದಾರೆ. ಕಾನೂನಿನ ಚೌಕಟ್ಟಿನಲ್ಲಿ ಇದಕ್ಕೆ ಅವಕಾಶವಿದೆಯೇ ಅಥವಾ ಇಲ್ಲವೇ ಎಂಬುದನ್ನು ತಾವು ಯೋಚನೆ ಮಾಡಬೇಕು. ನನಗೆ ತಿಳಿದಮಟ್ಟಿಗೆ ಸಂವಿಧಾನಬದ್ಧವಾಗಿ ಖಾತೆಗಳ ಹಂಚಿಕೆಯಾಗಿದೆ. ಇದರ ಪ್ರಕಾರ ಇವರಿಗೆ ಒಂದು ಇಲಾಖೆಯ ಅಧಿಕಾರ ವ್ಯಾಪ್ತಿಯನ್ನು ಕೊಡಲಾಗಿದೆ. ಇದರ ಹಿನ್ನೆಲೆಯಲ್ಲಿ ಈಗ ಸಭೆಯು ಮುಂದಿರುವ ವಿಷಯಕ್ಕೆ ಸಂಬಂಧಪಟ್ಟಂತೆ ಉತ್ತರ ಕೊಡುತ್ತಾರೆ. ಮಾನ್ಯ ಮಂತ್ರಿಗಳು ಸಹ ಉತ್ತರ ಕೊಡುವುದಾಗಿ ಹೇಳಿದ್ದಾರೆ ಮತ್ತು ಉತ್ತರ ಕೊಟ್ಟಮೇಲೆ ಇನ್ನೂ ಏನಾದರು ವಿವರಗಳು ಬೇಕಾದರೆ ಮಾನ್ಯ ಸಭೆಗೆ ಒದಗಿಸುವುದಾಗಿ ಹೇಳಿದ ಮೇಲೂ ಸಹ, ಅದು ಆಗುವುದಿಲ್ಲ. ಮುಖ್ಯಮಂತ್ರಿಗಳೇ ಬರಬೇಕು ಎನ್ನತಕ್ಕಂಥ ವಾದವನ್ನು ಏನಾದರು ಈಗ ಒಪ್ಪಿ ಕೊಂಡರೆ ಎಲ್ಲ ಸಮಯದಲ್ಲಿಯೂ ಮುಖ್ಯಮಂತ್ರಿಗಳೇ ಬರಬೇಕಾದಂಥ ಸನ್ನಿವೇಶ ಉಂಟಾಗುತ್ತದೆ.

ಮುಖ್ಯಮಂತ್ರಿಗಳು ಸಭೆಗೆ ಬರಬಾರದೆಂದು ನಾನು ಹೇಳುತ್ತಿಲ್ಲ. ಆದರೆ ಈ ಖಾತೆಗೆ ಸಂಬಂಧಪಟ್ಟಿ ಮಂತ್ರಿಗಳು ಈ ಘಟನೆಗೆ ಸಂಬಂಧಪಟ್ಟಂತೆ ಜವಾಬಾರಿಯಿಂದ ಹೇಳಿಕೆ ಕೊಡುವುದಾಗಿ ಹೇಳಿದ ಮೇಲೂ ಸಹ ಮುಖ್ಯಮಂತ್ರಿಗಳೇ ಬರಬೇಕೆನ್ನುವ ವಾದವನ್ನು ತಗ ಒಪ್ಪಿಕೊಂಡರೆ ಕಾನೂನು ಪ್ರಕಾರ ಮತ್ತು ನಿಯಮಾವಳಿಯ ಪ್ರಕಾರ ಈ ಸಭೆಯಲ್ಲಿ ಯಾವ ಕೆಲಸವನ್ನೂ ಮಾಡುವುದಕ್ಕಾಗುವುದಿಲ್ಲ.

(ಗಲಾಟೆ)

ಶ್ರೀ ಭೀಮಣ್ಣ ಖಂಡ್ರೆ.—ಇದು ಪೋಲೀಸ್ ರಾಜ್ಯವಾಗಿದೆ.

ಶ್ರೀ ಧರ್ಮಸಿಂಗ್.—ಈ ರಾಜ್ಯದಲ್ಲಿ ಸರ್ಕಾರದ ಆಡಳಿತವೇ ಇಲ್ಲವೆಂಬುದು ಗುಲ್ಬರ್ಗಕ್ಕೆ ಹೋಗಿ ನೋಡಿದರೆ ಗೊತ್ತಾಗುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಹೇಳುವುದಕ್ಕೆ ಅವಕಾಶ ಕೊಡದೆ ಮಾನ್ಯ ಧರ್ಮಸಿಂಗ್ ಅವರು ಬಹಳ ಎತ್ತರದ ಧ್ವನಿಯಿಂದ ಮಾತನಾಡುತ್ತಿದ್ದಾರೆ. ಅವರು ತಮ್ಮ ಧ್ವನಿಯನ್ನು ಎತ್ತರ ವಾಗಿಟ್ಟುಕೊಂಡು ಮಾತನಾಡಿದರೆ ಮತ್ತು ತಮ್ಮ ಒಂದು ಶಕ್ತಿ ಪ್ರದರ್ಶನವನ್ನು ಈ ರೀತಿ ಮಾಡುವು ದಾದರೆ ತಮಗಿಂತ ಹೆಚ್ಚಿನ ರೀತಿಯಲ್ಲಿ ಧ್ವನಿಯನ್ನು ಏರಿಸಿ ಮಾತನಾಡಲು ನಮಗೂ ಬರುತ್ತದೆ. ಇದರಲ್ಲಿ ನಾವು ನಿಮಗೇನೂ ಕಡಿಮೆ ಇಲ್ಲ

ಇನ್ನು ನನ್ನ ಎರಡನೇ ವಾದವೆಂದರೆ, ಮುಖ್ಯಮಂತ್ರಿಗಳು ಈ ಸಭೆಗೆ ಬರಬಾರದೆಂದು ಅಲ್ಲ. ಅವರು ಬರಬೇಕಾಗುತ್ತದೆ. ಅವರು ಏನಾದರು ಸಮಜಾಯಿಸಿ ಹೇಳಬೇಕಾದರೆ ಹೇಳಬೇಕಾಗುತ್ತದೆ. ಇದು ಏನಿದ್ದರೂ ಈ ಖಾತೆಯ ರಾಜ್ಯಮಂತ್ರಿಗಳು ಹೇಳಿಕೆ ಕೊಟ್ಟನಂತರ ಉದ್ಭವವಾಗುತ್ತದೆ.

SRI K. H. RANGANATH.—He is not holding the independent charge of the Home portfolio···

SRI MALLIKARJUNA S. KHARGE.—Has he got powers to suspend the S. P ? Is he going to take any action ?

SRI A. LAKSHMISAGAR.—The Government will take action.

SRI BHEEMANNA KHANDRE.—There is law lessness prevalling in the State. There is no Government at all.

(INTERRUPTIONS)

ಶ್ರೀ ಎಸ್. ಸೂರ್ಯನಾರಾಯಣರಾವ್.—ಈ ಒಂದು ಘಟನೆ ಜನರ ಮನಸ್ಸಿನಲ್ಲಿ ಕಳವಳವನ್ನು ಉಂಟುಮಾಡಿದೆ. ಪತ್ರಿಕಾ ಸ್ವಾತಂತ್ರ್ಯವನ್ನು ರಕ್ಷಣೆ ಮಾಡುತ್ತೇವೆಂದು ಹೇಳಿ ಇವರು ಅಧಿಕಾರಕ್ಕೆ ಬಂದಮೇಲೆ ಪತ್ರಿಕಾಹರಣವಾಗಿದೆ. ಈ ಪತ್ರಿಕೆಯ ಸಂಪಾದಕರನ್ನು ಜನರ ಮಧ್ಯದಲ್ಲಿ ಹೊಡೆದು ಅವಮಾನ ಮಾಡಿದ್ದಾರೆ ಮತ್ತು ಪೋಲೀಸರು ಇವರ ಬಗ್ಗೆ ಅಮಾನುಷ ರೀತಿಯಿಂದ ನಡೆದುಕೊಂಡಿದ್ದಾರೆ. ಇದರಿಂದ ಪ್ರಜಾಸತ್ತೆಗೆ ಕಳಂಕ ಬರುವ ಪರಿಸ್ಥಿತಿ ಒದಗಿಸಿದೆ. ಇವರು ಮಾಡಿರತಕ್ಕದ್ದು ಸಣ್ಣ ತಪ್ಪಲ್ಲ. ಇವರು ರೌಡಿಗಳ ಲಿಸ್ಟ್‌ನಲ್ಲಿ ಇಲ್ಲದಿದ್ದರೂ ಸಹ ಹೊಡೆದಿದ್ದಾರೆ. ಈಗಾಗಲೇ ಒಬ್ಬ ಯುವಕನ ಉಗುರು ಕಿತ್ತ ಪ್ರಕರಣ ನಡೆದಿದೆ. ಇದರ ನಂತರ ಇದು ನಡೆದಿದೆ. ಇವರು ಅಧಿಕಾರಕ್ಕೆ ಬರುವಾಗ ಪತ್ರಿಕಾ ಸ್ವಾತಂತ್ರ್ಯವನ್ನು ಕಾಪಾಡುತ್ತೇವೆಂದು ಹೇಳಿದ್ದರೂ ಈ ಪ್ರಕರಣ ನಡೆದಿದೆ. ಕಾನೂನಿನ ಚೌಕಟ್ಟಿನಲ್ಲಿ ಮಾನ್ಯ ರಾಜ್ಯ ಮಂತ್ರಿಗಳೇ ಇದಕ್ಕೆ ಉತ್ತರಕೊಡಲು ಅವಕಾಶವಿದ್ದರೂ ಸಹ ಈ ಸಭೆಯಂ ಘನತೆಯ ದೃಷ್ಟಿಯಿಂದ ಮಾತ್ರವಲ್ಲದೆ ಜನತೆಯ ಹಿತದೃಷ್ಟಿಯಿಂದಲೂ ಸಹ ಮಾನ್ಯ ಮುಖ್ಯಮಂತ್ರಿ ಗಳೇ ಬಂದು ಹೇಳಿಕೆ ಕೊಡುವುದು ಒಳ್ಳೆಯದು. ಆದರಿಂದಲೇ ನಾವು ಉತ್ತರವನ್ನು ನಿರೀಕ್ಷೆ ಮಾಡುತ್ತೇವೆ. ಇದರಲ್ಲಿ ತಪ್ಪು ಮಾಡಿದ ಅಧಿಕಾರಿಗಳು ಎಂತಹ ದೊಡ್ಡವರೇ ಇರಲಿ, ಅವರಿಗೆ ಶಿಕ್ಷೆ ವಿಧಿಸುತ್ತೇವೆಂಬ ಹೇಳಿಕೆಯನ್ನು ಮತ್ತು ಸೂಕ್ತವಾದಂಥ ತನಿಖೆ ಮಾಡಿಸುತ್ತೇವೆಂದು ಹೇಳಿಕೆ

ಕೊಟ್ಟಾಗ ಮಾತ್ರ ಪ್ರಜಾಸತ್ತೆ ಮತ್ತು ಈ ಸರ್ಕಾರಕ್ಕೂ ಗೌರವ ಉಳಿಯುತ್ತದೆಂದು ಹೇಳುತ್ತೇನೆ, It is a request, not a demand.

MR. SPEAKER.—Now it is already 5 P.M, So, the House stan adjourned to meet tomorrow at 11—00 A. M.

(The House adjourned at Five of the Clock to meet again at Eleven of the Clock on Tuesday, the 30th August 1983.)

WD 8188